# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 336
2. ಉತ್ತರಿಸುವ ದಿನಾಂಕ : 07/12/2023
3. ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್
4. ಉತ್ತರಿಸಬೇಕಾದ ಸಚಿವರು : ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಗೋಳ ಏತ ನೀರಾವರಿ ಯೋಜನೆಯಡಿ ಕಳೆದ 40 ವರ್ಷಗಳ ಹಿಂದೆ ಅಳವಡಿಸಿದ ಪಂಪ್ ಮತ್ತು ಮೋಟರ್‌ಗಳ ಕಾರ್ಯಕ್ಷಮತೆ ಕಡಿಮೆಯಾಗಿ ಸವಳಿಕೆಯಾಗಿರುವುದರಿಂದ ನೀರಿನ ಡಿಸ್ಚಾರ್ಜ್ ಸಾಮರ್ಥ್ಯ ಕಡಿಮೆಯಾಗಿರುವುದರಿಂದ ರೈತರ ಜಮೀನುಗಳಿಗೆ ಅವಶ್ಯಕತೆ ಇರುವ ನೀರು ಸಿಗದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ.<br>ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಗೋಳ ಏತ ನೀರಾವರಿ ಯೋಜನೆಗೆ 1968 ರಲ್ಲಿ ಚಾಲನೆ ನೀಡಲಾಗಿರುತ್ತದೆ. ಈ ಯೋಜನೆಯಿಂದ 142 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ಯಂತ್ರೋಪಕರಣಗಳನ್ನು ಸುಮಾರು 20 ವರ್ಷಗಳ ಹಿಂದೆ ಮರು ಅಳವಡಿಸಲಾಗಿರುವುದರಿಂದ ಪಂಪ್ ಮತ್ತು ಮೋಟಾರ್‌ಗಳ ಕಾರ್ಯಕ್ಷಮತೆ ಕಡಿಮೆಯಾಗಿ ರೈತರ ಜಮೀನಿಗೆ ಸಮರ್ಪಕವಾಗಿ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. |
| ಆ. | ನೂತನವಾಗಿ ಪಂಪ್ ಮತ್ತು ಮೋಟರ್ ಗಳನ್ನು ಅಳವಡಿಸಲು ಅನುದಾನ ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೇ; ಹಾಗಿದ್ದಲ್ಲಿ ಈ ಅನುದಾನವನ್ನು ಬಿಡುಗಡೆಗೊಳಿಸಿ ಹೊಸ ಪಂಪ್/ಮೋಟರ್‌ಗಳನ್ನು ಅಳವಡಿಸಲು ಸರ್ಕಾರದ ತಿರ್ಮಾನಗಳೇನು; | ನೂತನವಾಗಿ ಪಂಪ್ ಮತ್ತು ಮೋಟರ್‌ಗಳ ಅಳವಡಿಕೆಗಾಗಿ ಪ್ರಸ್ತಾವನೆ ಇರುತ್ತದೆ. ಅನುದಾನದ ಲಭ್ಯತೆ ಮೇರೆಗೆ ಪಂಪ್ ಮತ್ತು ಮೋಟರ್‌ಗಳನ್ನು ಅಳವಡಿಸಲು ಆದ್ಯತೆ ಮೇಲೆ ಕ್ರಮ ವಹಿಸಲಾಗುತ್ತಿದೆ. |
| ಇ. | ಹೊಸದಾಗಿ ಪಂಪ್/ಮೋಟರ್‌ಗಳನ್ನು ಯಾವ ಕಾಲಮಿತಿಯಲ್ಲಿ ಅಳವಡಿಸಲಾಗುವುದು?(ಮಾಹಿತಿ ನೀಡುವುದು) | |

ಕಡತ ಸಂಖ್ಯೆ: MID/68/LCQ/2023

(ಎನ್.ಎಸ್. ಭೋಸರಾಜು)
ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು